ಆತ್ಮೀಯರೇ/ಮಾನ್ಯರೇ,

ನಾನು ಶೇಖರ್, ಜಂಟಿ ನಿರ್ದೇಶಕರು(ತನಿಖೆ), ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು ದಿನಾಂಕ:31.05.2025 ರಂದು ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದುತ್ತಿದ್ದೇನೆ.

ದಿ:16.03.1992 ರಿಂದ ದಿ:31.05.2025ರ ತನಕ 33 ವರ್ಷ, 02 ತಿಂಗಳು, 14 ದಿನಗಳ ಸರ್ಕಾರಿ ಸೇವೆಯ ನಂತರ ಸರ್ಕಾರಿ ವೃತ್ತಿಯಿಂದ ನಿವೃತ್ತನಾಗುತ್ತಿದ್ದೇನೆ.

ನನ್ನ ತಂದೆ ತಾಯಿ, ಕುಟುಂಬ ವರ್ಗ, ನನಗೆ ವಿದ್ಯೆ ಕಲಿಸಿದ ಗುರುಗಳು, ಸಹೋದ್ಯೋಗಿಗಳು, ಮಿತ್ರವೃಂದ ಹಾಗೂ 33 ವರ್ಷಕ್ಕಿಂತ ಹೆಚ್ಚು ಅವಧಿಗೆ ಸರ್ಕಾರಿ ಸೇವೆಯನ್ನು ಮಾಡಲು ಅನುವು ಮಾಡಿಕೊಟ್ಟ ಘನ ಸರ್ಕಾರ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಗೆ ನಾನು ಅಭಾರಿಯಾಗಿದ್ದೇನೆ.

ನಾನು ಕೆ.ಪಿ.ಎಸ್.ಸಿ ಮುಖಾಂತರ ನಾನ್ ಇಂಜಿನಿಯರಿಂಗ್ ವಿಭಾಗದ ಕಮರ್ಷಿಯಲ್ ಪ್ರಾಕ್ಟೀಸ್ ಉಪನ್ಯಾಸಕನಾಗಿ ನೇರ ನೇಮಕಾತಿ ಹೊಂದಿ, ದಿ:16.03.1992ರಂದು ಸರ್ಕಾರಿ ಪಾಲಿಟೆಕ್ನಿಕ್, ಕಾರವಾರ ಸಂಸ್ಥೆಯಲ್ಲಿ ಕಾರ್ಯವರದಿ ಮಾಡಿಕೊಂಡಿರುತ್ತೇನೆ.

ನಾನು ಉಪನ್ಯಾಸಕನಾಗಿ ವೃತ್ತಿ ಜೀವನ ಆರಂಭಿಸಿದ ನಂತರ ವಿಭಾಗಾಧಿಕಾರಿಯಾಗಿ, ಪ್ರಾಂಶುಪಾಲರಾಗಿ, ಸಹಾಯಕ ನಿರ್ದೇಶಕರಾಗಿ, ಉಪ ನಿರ್ದೇಶಕರಾಗಿ ಹಾಗೂ ಸರ್ಕಾರದಿಂದ ಅಧಿಕೃತವಾಗಿ ನೇಮಕಗೊಂಡು ಜಂಟಿ ನಿರ್ದೇಶಕರಾಗಿ ಕಾರ್ಯನಿರ್ವಹಿಸಿ, ಇಲಾಖೆಯ ಎಲ್ಲಾ ಹಂತದ ಕೆಲಸ ಕಾರ್ಯಗಳಲ್ಲಿ, ಇಲಾಖೆಯ ಮೇಲಾಧಿಕಾರಿಗಳ ಮಾರ್ಗದರ್ಶನ, ಸಹೋದ್ಯೋಗಿಗಳ ಸಹಕಾರದೊಂದಿಗೆ ನನ್ನನ್ನು ನಾನು ತೊಡಗಿಸಿಕೊಂಡು, ನಿಷ್ಠೆ ಮತ್ತು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿರುತ್ತೇನೆ. ಮೈಸೂರಿನ ಸಿ.ಪಿ.ಸಿ (ಸರ್ಕಾರಿ) ಪಾಲಿಟೆಕ್ನಿಕ್, ಹಾಸನ ಜಿಲ್ಲೆಯ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರಿನ ಎಸ್.ಆರ್.ಸಿ.ಐ.ಬಿ.ಎಂ, ಹಾಗೂ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿ, ವಿದ್ಯಾರ್ಥಿ ಸಮೂದಾಯದ ಉನ್ನತಿಗಾಗಿ ನನ್ನ ಕಾರ್ಯ ವ್ಯಾಪ್ತಿಯ ಇತಿ-ಮಿತಿಯಲ್ಲಿ ನನ್ನಿಂದಾಗಬಹುದಾದ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ನನ್ನ ವೃತ್ತಿಯ ಹಾದಿಯಲ್ಲಿ ಎಲ್ಲಾ ರೀತಿಯ ಏಳಿಗೆಗೆ ನನ್ನ ಎಲ್ಲಾ ವಿದ್ಯಾರ್ಥಿಗಳ ನಿಷ್ಕಳಂಕ ಹಾರೈಕೆಗಳು ಎಂಬುದನ್ನು ನಾನು ನೆನೆಸುತ್ತೇನೆ.

ಕೇಂದ್ರ ಕಛೇರಿಯಲ್ಲಿ ಜಂಟಿ ನಿರ್ದೇಶಕರಾಗಿ ಕಾರ್ಯನಿರ್ವಹಿಸಲು ಪ್ರೋತ್ಸಾಹಿಸಿದ ಇಲಾಖೆಯ ದಕ್ಷ ಹಾಗೂ ಕ್ರಿಯಾಶೀಲ ನಿರ್ದೇಶಕರಾದ ಶ್ರೀ ಪ್ರಸನ್ನ.ಹೆಚ್, I.A.S ರವರಿಗೆ ಹಾಗೂ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತರಾದ ಶ್ರೀಮತಿ ಮಂಜುಶ್ರೀ. ಎನ್, I.A.S ರವರಿಗೆ ಅನಂತ ನಮಸ್ಕಾರಗಳು ಮತ್ತು ಇಲಾಖೆಯಲ್ಲಿ ನನ್ನ ಮೇಲಾಧಿಕಾರಿಗಳಾಗಿದ್ದ ದಿವಂಗತ ಶ್ರೀ ಕೆ. ಪಿ. ಬೋರಯ್ಯ, ಅಪರ ನಿರ್ದೇಶಕರನ್ನು ಈ ಸಂದರ್ಭದಲ್ಲಿ ನಾನು ನೆನಪಿಸುತ್ತಾ ನಮಿಸುತ್ತೇನೆ.

ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಜಂಟಿ ಕಾರ್ಯದರ್ಶಿಗಳು, ಉಪ ಕಾರ್ಯದರ್ಶಿಗಳು, ಅಧೀನ ಕಾರ್ಯದರ್ಶಿಗಳು ಹಾಗೂ ಅಧಿಕಾರಿ ವೃಂದಕ್ಕೆ ನನ್ನ ವಂದನೆಗಳು.

ವೃತ್ತಿಯ ಜೊತೆಯಲ್ಲಿ ಕಾರ್ಯನಿರ್ವಹಿಸಿದ ಇಲಾಖೆಯ ಹಾಲಿ ಮತ್ತು ನಿವೃತ್ತ ಎಲ್ಲಾ ಜಂಟಿ ನಿರ್ದೇಶಕರು, ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು, ಆಡಳಿತಾಧಿಕಾರಿಗಳು, ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು, ಇಲಾಖಾ ಅಧೀನಕ್ಕೊಳಪಡುವ ಎಲ್ಲಾ ಇಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳ ಪ್ರಾಂಶುಪಾಲರು, ಪ್ರಾಧ್ಯಾಪಕರು ಮತ್ತು ಉಪನ್ಯಾಸಕರು, ಕಛೇರಿ ಸಿಬ್ಬಂದಿ, ಕಾರ್ಯಗಾರ ಸಿಬ್ಬಂದಿ ಹಾಗೂ ಅರೆಕಾಲಿಕ ನೌಕರರು ಎಲ್ಲರಿಗೂ ನನ್ನ ವಂದನೆಗಳು.

ತಾಂತ್ರಿಕ ಶಿಕ್ಷಣವನ್ನು ಕಲಿಸುವುದರ ಜೊತೆಗೆ ಜೀವನದ ಕೌಶಲ್ಯಗಳು ಮತ್ತು ನೈತಿಕ ಮೌಲ್ಯಗಳನ್ನು ಕಲಿಸುವುದು ಅತ್ಯಂತ ಮುಖ್ಯವಾದದ್ದು, ಆ ನಿಟ್ಟಿನಲ್ಲಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿ ಹಾಗೂ ಸಮಾಜದ ಏಳಿಗೆಯಾಗುವಂತಹ ಮತ್ತಷ್ಟು ದೂರ ದೃಷ್ಟಿಯುಳ್ಳ ಕ್ರಿಯಾ ಯೋಜನೆಗಳೊಂದಿಗೆ, ಉತ್ತಮ ಭವಿಷ್ಯ ರೂಪಿತವಾಗಲಿ ಎಂದು ಆಶಿಸುತ್ತಾ, ನಾನು ಅತ್ಯಂತ ಸಂತೃಪ್ತಿಯಿಂದ ಮತ್ತು ಸಂತೋಷದಿಂದ ವಯೋನಿವೃತ್ತಿ ಹೊಂದುತ್ತಿದ್ದೇನೆ ಎಂದು ತಮ್ಮೆಲ್ಲರಿಗೂ ತಿಳಿಸಲು ಹರ್ಷಿಸುತ್ತೇನೆ.

ದಿನಾಂಕ:14.05.2025

14/5/25

(ಶೇಖರ್)

ಸ್ಥಳ: ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು